# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 707 |
| ಮಾನ್ಯ ಸದಸ್ಯರ ಹೆಸರು | ಡಾ. ತಳವಾರ ಸಾಬಣ್ಣ (ನಾಮನಿರ್ದೇಶಿತ) |
| ಉತ್ತರಿಸಬೇಕಾದ ದಿನಾಂಕ | 23/12/2022 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರಿಗೆ ಸುಮಾರು 19 ಸೌಲಭ್ಯಗಳನ್ನು ಕಾರ್ಮಿಕ ಇಲಾಖೆ ಹಮ್ಮಿಕೊಂಡಿದ್ದು, ಫಲಾನುಭವಿಗಳಿಗೆ ಈ ಸೌಲಭ್ಯಗಳು ನೇರವಾಗಿ ತಲುಪಲು ಹಾಗೂ ಪಾರದರ್ಶಕತೆ ತರಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿರುವುದು ನಿಜವೇ; | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ರಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸುವ ಪ್ರಕ್ರಿಯೆ ಹಾಗೂ ನೋಂದಣಿಯ ನಂತರ ಸದರಿ ಫಲಾನುಭವಿಗಳು ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ ವಿವಿಧ ಸಹಾಯ ಧನವನ್ನು ಪಡೆಯಲು ಇ-Governance Department ನ ಸೇವಾ ಸಿಂಧು ತಂತ್ರಾಂಶದಲ್ಲಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| ಆ) | ರಾಜ್ಯದಲ್ಲಿ ಪಾಸಿನ ನೋಂದಣಿಗೆ ನಿಯಮ ಇರುವಂತಹ ಕಟ್ಟಡ ಕಾರ್ಮಿಕರು ಸಹ ಪ್ರಾರಂಭದಿಂದಲೂ ಎಲ್ಲಾ ಪ್ರಕ್ರಿಯೆ ಕೈಗೊಳ್ಳಲು ಏಜೆಂಟ್ ಹಾವಳಿ ಹೆಚ್ಚಾಗಿದ್ದು ಕಾರ್ಮಿಕರಿಂದ ಶೇಕಡಾ 25-30 ರಷ್ಟು ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಫಲಾನುಭವಿಗಳು ಮಂಡಳಿಯ ಸೌಲಭ್ಯಗಳನ್ನು ಪಡೆದು ಕೊಳ್ಳಲು ಅನುಸರಿಸಬೇಕಾದ ವಿಧಾನ ಮತ್ತು ಕ್ರಮಗಳ ಬಗ್ಗೆ ಕಾರ್ಮಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಇದಲ್ಲದೇ, ಕಾರ್ಮಿಕರು ಮಧ್ಯವರ್ತಿಗಳ ಮೊರೆ ಹೋಗಬಾರದು ಎನ್ನುವ ಬಗ್ಗೆ ಅಗ್ಗಿಂದಾಗ್ಗೆ ವಾರ್ತಾ ಪತ್ರಿಕೆಗಳ ಸಹಿತ ವಿವಿಧ ಮಾಧ್ಯಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಹಾಗೂ ಪಾರದರ್ಶಕ ಕ್ರಮಗಳನ್ನು ಅನುಸರಿಸಲಾಗುತ್ತಿದೆ.<br><br>ಮಧ್ಯವರ್ತಿಗಳು ಶೇ.25 ರಿಂದ 30 ರಷ್ಟು ಹಣ ವಸೂಲಿ ಮಾಡುತ್ತಿರುವ ಬಗ್ಗೆ ಮಂಡಳಿಗೆ ದೂರುಗಳು ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಇ) | ಇದಕ್ಕೆ ಕಾರ್ಮಿಕರ ಇಲಾಖೆಯಿಂದ ಅಧಿಕಾರಿಗಳು ಶಾಮೀಲಾಗಿದ್ದು, ಹಣ ನೀಡದಿದ್ದರೆ ಸೌಲಭ್ಯಗಳು ಸಿಗುವುದಿಲ್ಲ ಎಂದು ಏಜೆಂಟರು ಫಲಾನುಭವಿಗಳಿಗೆ ನೇರವಾಗಿ ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಂತಹ ಪ್ರಕರಣಗಳು ಮಂಡಳಿಯಲ್ಲಿ ವರದಿಯಾಗಿರುವುದಿಲ್ಲ. |
| ಈ) | ನೋಂದಣಿ ಮಾಡಿಸಿದ ಕಟ್ಟಡ ಕಾರ್ಮಿಕರ ಸಂಖ್ಯೆ 37 ಲಕ್ಷದಷ್ಟಿದ್ದರೆ, ಕಾರ್ಮಿಕರಲ್ಲದ 8-10 ಲಕ್ಷ ನಕಲಿ ಕಾರ್ಡುದಾರರಿಗೆ ನೋಂದಣಿ ಮಾಡಿಸಿ ಲಾಭ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೋಂದಣಿಯಾದ ಕಾರ್ಮಿಕರ ಪೈಕಿ ನಕಲಿ ಕಾರ್ಡುದಾರರ ಮಾಹಿತಿ ಮಂಡಳಿಯಲ್ಲಿ ಇರುವುದಿಲ್ಲ. ನೋಂದಣಿಯನ್ನು ಪಾರದರ್ಶಕವಾಗಿ ನಿಯಮಾನುಸಾರ ಮಾಡಲಾಗುತ್ತಿದೆ. |
| ಉ) | ಈ ಏಜೆಂಟರ ದೊಡ್ಡ ಜಾಲ ತಡೆದು ನಕಲಿ ಕಾರ್ಡುದಾರರನ್ನು ರದ್ದುಪಡಿಸಿ ಕಟ್ಟಡ ಕಾರ್ಮಿಕರ ಸಹಾಯಕ್ಕೆ ಬರಲು ಸರ್ಕಾರ ತೆಗೆದುಕೊಂಡ ಕ್ರಮವೇನು; ಈ ರೀತಿಯ ಶಾಮೀಲಾದ ಭ್ರಷ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಶಿಸ್ತಿನ ಕ್ರಮವೇನು? | ಅನರ್ಹ ಕಾರ್ಮಿಕರು ನಕಲಿ ಕಾರ್ಡುದಾರರು ಪತ್ತೆಯಾದಲ್ಲಿ ಅವರ ಸದಸ್ಯತ್ವವನ್ನು ಅಮಾನತ್ತು/ ರದ್ದು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಅಧಿಕಾರಿಗಳು ಇಂತಹ ಜಾಲದಲ್ಲಿ ಶಾಮೀಲಾಗಿರುವ ಬಗ್ಗೆ ಮಂಡಳಿಯಲ್ಲಿ ವರದಿಗಳು ಇರುವುದಿಲ್ಲ. |

ಕಾಇ 699 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು